ಜಾಕೋಬ್ ಡಿಸೋಜ, ಕುರುವಳ್ಳಿ
ಜೀವನದಲ್ಲಿ ಮನುಷ್ಯ ತನಗೆ ಗೊತ್ತಿಲ್ಲದೆ ಮಾಡುವ ಕೆಲಸ ಯಾವುದು?



ನಿದ್ರೆ!

ಅಮರಯ್ಯ ಪತ್ರಿಮಠ, ಶೋರಾಪೂರ
ಗಾಂಧಿ ಟೋಪಿಗೂ, ಮಕ್ಮಲ್ ಟೋಪಿಗೂ ಏನು ವ್ಯತ್ಯಾಸ?
ಮಕ್ಮಲ್‌ನಿಂದ ಮಕ್ಮಲ್ ಟೋಪಿ ಸರಿ, ಗಾಂಧಿಯಿಂದ ಗಾಂಧಿಟೋಪಿ ಅಲ್ಲ!

ಹೆಚ್.ಎನ್.ವಿಶ್ವನಾಥ್, ಶಿವಮೊಗ್ಗ
ಒಳ್ಳೆಯ ಹೆಂಡತಿಯನ್ನು ಪಡೆಯಲು ಪೂರ್ವಾರ್ಜಿತ ಪುಣ್ಯದ ಫಲವಿರಬೇಕಂತೆ ಹೌದೆ ಗುರುಗಳೆ?
ಪೂರ್ವಾರ್ಜಿತವೇ! ಪಶ್ಚಿಮಾರ್ಜಿತವಾದರೆ ವಿವಾಹಕ್ಕಿಂತಲೂ ಡೈವೋರ್ಸ್ ನೀಡುವ ಹೆಣ್ಣುಗಳೇ ಹೆಚ್ಚು!

ಎಸ್.ಜಿ.ಆರ್.ರೆಡ್ಡಿ, ಗೌರಿಬಿದನೂರು
ನಿಮಗೆ ಅರ್ಥವಾಗದ ಲಿಪಿಯಲ್ಲಿ ಪ್ರಶ್ನೆ ಬರೆದು ಕಳುಹಿಸಿದರೆ ಯಾವ ರೀತಿ ಉತ್ತರಿಸುತ್ತೀರಾ?



ಜಗತ್ತಿಗೇ ಅರ್ಥವಾಗದ ಲಿಪಿಯಲ್ಲಿ!

ಗಾಯತ್ರಿ, ರಾಜಾಜಿನಗರ
ಪ್ರೀತಿಯಲ್ಲಿ ದೊಡ್ಡವರದು, ಚಿಕ್ಕವರದು ಎಂದಿದೆಯೇ?
ಇಲ್ಲದೆ ಏನು! ದೊಡ್ಡವರದು ದುಡ್ಡಿನ ಪ್ರೀತಿ, ಚಿಕ್ಕವರದು ಚೊಕ್ಕ ಪ್ರೀತಿ.

ಕೆ.ವಿ. ಶಿವಕುಮಾರ, ಕಾಳೀಹುಂಡಿ
ಜಗವೇ ಒಂದು ನಾಟಕರಂಗ. ಅದರಲ್ಲಿ ನಿಮ್ಮ ಪಾತ್ರವೇನು?
ಆಗಾಗ್ಗೆ ಗೇಲಿಗೊಳಗಾಗುವ ವಿದೂಷಕ!

ಮಲ್ಲನಗೌಡ ಸಿ ಪಾಟೀಲ, ರಂಭಾಪುರ
ಕುಡುಕನಿಗೆ ಸೌಮ್ಯ ಹೆಂಡತಿ, ಸೌಜನ್ಯವಂತನಿಗೆ ಗಯ್ಯಾಳಿ; ಏಕೆ ಹೀಗೆ?
ವಿರುದ್ಧ ದಿಕ್ಕುಗಳು ಆಕರ್ಷಿಸುವುದು ಆಯಸ್ಕಾಂತದ ನಿಯಮ.

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
ತಾಯಿನಾಡು ಎನ್ನುತ್ತಾರೆ, ತಂದೆನಾಡು ಎನ್ನುವುದಿಲ್ಲ; ಏಕೆ?
ಪಿತ್ರಾರ್ಜಿತವೆಂದರೆ ಎಲ್ಲರಿಗೂ ಪಾಲು ನೀಡಬೇಕಲ್ಲ!

ಪ್ರದೀಪಕುಮಾರ, ಹೂವಿನಹಡಗಲಿ
ಹಿಂದಿನ ರಾಜರು ತಮ್ಮ ಪುತ್ರನಿಗೆ ಪಟ್ಟ ಕಟ್ಟುವುದಕ್ಕೂ, ಇಂದಿನ ರಾಜಕಾರಣಿಗಳು ಪುತ್ರರಿಗೆ ಟಿಕೆಟ್ ಕೊಡಿಸುವುದಕ್ಕೂ ಏನು ವ್ಯತ್ಯಾಸ?
ಅದು ಸಂಪ್ರದಾಯ ಬದ್ಧ, ಇದು sumಪ್ರಧಾನ ಬದ್ಧ!

ಎಸ್.ಪಿ.ರಮೇಶ್, ಮೈಸೂರು
ಚಂಬಲ್ ಡಕಾಯಿತರು ಕೊಳ್ಳೆಯನ್ನು ಬಡವರಿಗೆ ಹಂಚುತ್ತಿದ್ದರು. ಈಗಿನ ಜನಪ್ರತಿನಿಧಿಗಳು?
ಇವರೂ ಹಂಚುತ್ತಾರೆ; ಆದರೆ 5 ವರ್ಷಕ್ಕೊಮ್ಮೆ, ಸ್ಲಂಗಳಲ್ಲಿ ಮಾತ್ರ!

ಸವಿತ ರವಿಕುಮಾರ್, ಚಿಕ್ಕಮಗಳೂರು
ಸೃಷ್ಟಿಕರ್ತ ಬ್ರಹ್ಮ ಕೆಲವು ದಿನ ರೆಸ್ಟ್ ತೆಗೆದುಕೊಂಡರೆ?
ಸಿಜೇರಿಯನ್ ನರ್ಸಿಂಗ್ ಹೋಂಗಳು, ಸೂಲಗಿತ್ತಿಯರ ಸಂಘ ಸ್ಟ್ರೈಕ್ ಮಾಡುವರಂತೆ!

ನಖಾತೆ ಆನಂದರಾವ್, ಬೆಂಗಳೂರು
ಅಸೂಯೆ, ನಿನ್ನ ಹೆಸರು ಹೆಣ್ಣು ಎಂದರು ಷೇಕ್ಸ್‌ಪಿಯರ್. ಕಾಳಿದಾಸ ಎಂದುದೇನು?
ಸ್ತ್ರೀಣಾಂ ಅಶಿಕ್ಷಿತ ಪಟುತ್ವಂ!

ಪಿ.ಎಸ್. ಶ್ರೀವತ್ಸ, ಬೆಂಗಳೂರು
ನೆಮ್ಮದಿಗೂ, ಆರೋಗ್ಯಕ್ಕೂ ಸಂಬಂಧವಿದೆಯೇ?
ನಿಮ್ಮ ಅನಾರೋಗ್ಯವೇ ವೈದ್ಯರ ನೆಮ್ಮದಿ.

ಶ್ರೀಮತಿ ಸುನಂದಮ್ಮ, ಗೌರಿಬಿದನೂರು
ಪ್ರತಿ ರಾಜಕಾರಣಿಯ ಬಗ್ಗೆ ಕೊಂಕು ನುಡಿಯುವ ನೀವೇ ಏಕೆ ರಾಜಕಾರಣಿಯಾಗಬಾರದು?
ಇನ್ನೂ ಆ ಮಟ್ಟಕ್ಕೆ ಮಾನ, ಮರ್ಯಾದೆ ಕಳೆದುಕೊಳ್ಳಲು ಆಗಿಲ್ಲವಲ್ಲಾ..!

## ಬಹುಮಾನಿತ ಪ್ರಶ್ನೆ

ಸುನೀಲ್ ಜೋಯಿಸ್, ಹೂವಿನಹಡಗಲಿ
ಮಕ್ಕಳ ಮನಸ್ಸನ್ನು ಹಿರಿಯರು ಅರಿಯುವುದು ಕಷ್ಟವೋ, ಹಿರಿಯರದನ್ನು ಮಕ್ಕಳು ಅರಿಯುವುದು ಕಷ್ಟವೋ?
ಒಲುಮೆ, ಬಲುಮೆ, ತಾಳ್ಮೆ ಇದ್ದರೆ ಎರಡೂ ಕಷ್ಟವಲ್ಲ!

ಎನ್.ಪ್ರಕಾಶ್, ದೇವನಹಳ್ಳಿ
ನಂಬಿಕೆ ದ್ರೋಹವೆಂಬ ರೋಗವು ಬುಡವನ್ನು, ವಂಚನೆಯ ವಿಷವು ಕೊಂಬೆಯನ್ನು, ಕ್ರೌರ್ಯವೆಂಬ ಬೆಂಕಿಯು ಇಡೀ ವೃಕ್ಷವನ್ನು ನಾಶ ಮಾಡುತ್ತಿರಲು, ಆ ವೃಕ್ಷವನ್ನು ರಕ್ಷಿಸುವವರು ಯಾರು?
ವಸ್ತುಸಂಗ್ರಹಾಲಯದವರು!

ಕೆ.ಎನ್.ನಾರಾಯಣರೆಡ್ಡಿ, ಕೆ.ಜಿ.ಎಫ್.
ರಾಜಕಾರಣಿಗಳು ಏಕೆ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ?
ಪರಹತ್ಯೆ ಮನದಲ್ಲಿರುವವರಿಗೆ ಆತ್ಮಹತ್ಯೆ ಅಸಂಭವ!

ಎಂ.ಕೆ.ರವಿಕಾಂತ, ತುಮಕೂರು
ಕೃತಕ ಮೆದುಳನ್ನು ಮಂತ್ರಿಗಳಿಗೆ ಅಳವಡಿಸಿದರೆ ಕರ್ನಾಟಕ ಅಭಿವೃದ್ಧಿ ಹೊಂದುವುದೆ ರಾಮ್ ಸರ್?
ಕೃತಕ ಮೆದುಳೂ ಕರಪ್ಟ್ ಆಗಿಬಿಡುವುದಂತೆ!

ಎಂ.ಜಿ.ರಾಜಶೇಖರ ಶೆಟ್ಟಿ, ದೊಡ್ಡಬಳ್ಳಾಪುರ
ಮಕ್ಕಳಾಗಿದ್ದಾಗ ಬಾಲಲೀಲೆ; ದೊಡ್ಡವರಾದ ಮೇಲೆ?
ಬಾರ್‍ಲ್ಲಿ ಇಲ್ಲಿ, ಲೇಯ್ ಎನ್ನಿಸಿಕೊಳ್ಳುವ ಪಾಲೇ!

ಶ್ರೀಮತಿ ಸುಧಾರಾಜ್, ಮೈಸೂರು
ಹರ ಮುನಿದರೆ ಗುರು ಕಾಯ್ವನು; ಪ್ರಕೃತಿ ಮುನಿದರೆ ಗುರು..?
ಕಾಯ್ವನು; ಕೊಂಡೊಯ್ಯುವ ಹೆಲಿಕಾಪ್ಟರ್‌ಗಾಗಿ!

ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ
ಕಾಂಗ್ರೆಸ್‌ನಿಂದ ಶುರುವಾದ ಲಂಚ ಬಿಜೆಪಿಗೂ ಮುಂದುವರಿದಿದೆಯಲ್ಲಾ..?



ಪಾರ್ಟಿ ಬದಲು ಆದರೇನು ಲಂಚ ನವನವೀನ. ನಮ್ಮಲ್ಲಿ ಭ್ರಷ್ಟಾಚಾರ ಮಾತ್ರ ಸರ್ವಶ್ರೇಷ್ಠ. ಅದು ಜಾತ್ಯತೀತ, ಲಿಂಗಾತೀತ, ಪಕ್ಷಾತೀತ!

■ ರಾಮ್